# ಬಚ್ಚಲು

ನಾನು ಬಚ್ಚಲು
ನನ್ನ ಮೈಯೊಳಗೆ
ಹರಿಯುತ್ತದೆ
ಗಬ್ಬೆದ್ದು ನಾರುವ ನೀರು

ನದಿಗಳಾದರೂ
ಕೆಲವು ಸಲ ಬತ್ತಬಹುದು
ನಾನು ಬತ್ತಿಹೋದ
ದಿನವೇ ಇಲ್ಲ
ಸದಾ ಹರಿಯುತ್ತಿರುತ್ತೇನೆ

ಮಲ ಮೂತ್ರವೆನ್ನದೆ
ತಿಂಗಳ ನೋವಿನ
ಕಲ್ಮಶಗಳನ್ನು
ನಿತ್ಯ ಹೊತ್ತು ಸಾಗುತ್ತಲೇ
ಇರುತ್ತೇನೆ

ನನ್ನೊಳಗೆ
ಉಗಿದು ಹೋದವರೆಷ್ಟೋ
ಲೆಕ್ಕವಿಟ್ಟಿಲ್ಲ
ಕೆಸರು ರಾಡಿಯೊಳಗೆ
ಮಿತುಗುಟ್ಟುವ
ಹುಳಗಳನ್ನು ಸೃಷ್ಟಿಸಿ
ಕೋಳಿಗಳಿಗೆ
ಮೃಷ್ಟಾನ್ನ ಬಡಿಸುತ್ತೇನೆ

ಹೇಳಲಾಗದ ಎಷ್ಟೋ
ನೋವುಗಳು ಸದ್ದಿಲ್ಲದೆಯೇ
ಹಾಗೇ ಹರಿದು ಹೋಗುತ್ತವೆ

ಒಮ್ಮೊಮ್ಮೆ ಕಸ ಕಡ್ಡಿ
ತ್ಯಾಜ್ಯಗಳು ಕಟ್ಟಿಕೊಂಡು ನರಳುತ್ತೇನೆ
ಪೊರಕೆ ಹಿಡಿದ ಪುಣ್ಯಾತ್ಮನಿಂದ
ಮುಕ್ತಿ ಸಿಗುತ್ತದೆ...

ಹೌದು ನಾನು ಬಚ್ಚಲು
ಸದಾ ಹರಿಯುತ್ತಿರುತ್ತೇನೆ
ಲೋಕವೆಲ್ಲವನ್ನು ಶುಚಿಯಾಗಿ
ಒಪ್ಪಗೊಳಿಸಿ
ಕೊಳಕುಗಳನ್ನೆಲ್ಲ ಮುಚ್ಚಲು

● **ಅಭಿಷೇಕ್ ವೈ.ಎಸ್.**

